ಶ್ರೀ ಎಸ್. ಎಂ. ಮರಿಯಪ್ಪನವರು (ಪಿರಿಯಾಪಟ್ಟಣ).—ಪಬ್ಲಿಕ್‌ವರ್ಕ್ಸ್ ಇಲಾಖೆಯ ಕೆಲವು ಕೆಲಸಗಳಲ್ಲಿ ಕೆಲವನ್ನು ಡಿಸ್ಟ್ರಿಕ್ಟ್ ಬೋರ್ಡಿಗೆ ವರ್ಗಮಾಡಿಲ್ಲವೆ ?

Sri Kadidal MANJAPPA.—That does not arise out of this question.

Promotion of maistries as Sub-overseers in the P. W. D.

Q.—458. **Sri Y. M. CHANDRASEKHARIAH** (Kadur).—

Will the Government be pleased to state :—

(*a*) the number of Sub-Overseers in Public Works Department who have been promoted from the rank of maistries and who have not passed any Mechanical and Electrical Engineering tests and who do not possess any educational qualifications ;

(*b*) whether they have been authorised to record entries in the Measurement Books ;

(*c*) whether these persons possess any knowledge of Civil Engineering ?

A.—**Sri Kadidal MANJAPPA** (Minister for Revenue and Public Works).—

(*a*) Sub-Overseers are appointed by direct recruitment and not promoted from the rank of maistries.

(*b*) and (*c*) Do not arise in view of reply to (*a*) above.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ಪರೀಕ್ಷೆ ಪಾಸುಮಾಡಿರುವವರೇ ಇದ್ದಾರೆ ಎಂದು ಉತ್ತರದಲ್ಲಿ ಹೇಳಿದ್ದೀರಿ. ಇವರಲ್ಲಿ 'ಸುಕ್ಕೂರ್' ಪರೀಕ್ಷೆ ಮಾಡಿರುವವರೂ ಇದ್ದಾರೆಯೆ ?

ಶ್ರೀ ಕಡಿದಾಳ್ ಮಂಜಪ್ಪನವರು.— ಸುಕ್ಕೂರ್ ಪರೀಕ್ಷೆ ಎಂದರೇನು ? ಕನ್ನಡಕ್ಕೆ ತರ್ಜುಮೆಯಾದ ಉತ್ತರದಲ್ಲಿ ಮುದ್ರಣದ ತಪ್ಪಿರಬಹುದು. ಮೇಸ್ತ್ರಿಗಳಿಗೆ ಸಬ್ ಓವರ್‌ಸಿಯರ್ ಆಗಿ ಪ್ರಮೋಷನ್ ಕೊಡುವುದಿಲ್ಲ. ಅವರಿಗೆ ಅರ್ಹತೆಯಿದ್ದರೆ ವರ್ಕ್ಸ್ ಇನ್‌ಸ್ಪೆಕ್ಟರುಗಳಾಗಿ ನೇಮಿಸುತ್ತಾರೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ಬೆಂಗಳೂರಿನಲ್ಲೋ ತಮ್ಮೂರಿನಲ್ಲೋ ಮನೆಯಲ್ಲೇ ಇದ್ದುಕೊಂಡು ಪೋಸ್ಟಿನ ಮೂಲಕ ಪರೀಕ್ಷೆ ಮಾಡಿರುವವರು, ಎಂದರೆ, ಸುಕ್ಕೂರ್ ಪರೀಕ್ಷೆ ಮಾಡಿರುವವರಲ್ಲವೆ!

ಶ್ರೀ ಕಡಿದಾಳ್ ಮಂಜಪ್ಪನವರು.— ಸುಕ್ಕೂರ್ ಪರೀಕ್ಷೆ ಎಂದರೆ ನನಗೆ ಅರ್ಥವಾಗಿಲ್ಲ. ಬೆಂಗಳೂರಿನ ಇಂಜಿನಿಯರಿಂಗ್ ಸ್ಕೂಲಿನಲ್ಲಿ ಮೂರುವರ್ಷ ಶಿಕ್ಷಣ ಪಡೆದು ಆ ಮೇಲೆ ಪರೀಕ್ಷೆಯಲ್ಲಿ ಉತ್ತೀರ್ಣರಾದಮೇಲೆ ಅಂಥವರನ್ನು ನೇಮಿಸುವುದು.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ಶಿಕ್ಷಣ ಪಡೆಯುವುದು ಅಲ್ಲೊ ; ಇಲ್ಲೊ ?

ಶ್ರೀ ಕಡಿದಾಳ್ ಮಂಜಪ್ಪನವರು.— ಇಂಜಿನಿಯರಿಂಗ್ ಸ್ಕೂಲಿನಲ್ಲಿ.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ತಮ್ಮ ತಮ್ಮ ಊರಿನಲ್ಲಿ ಕುಳಿತುಕೊಂಡು ಕಾಗದದ ಮುಖೇನ ಪರೀಕ್ಷೆ ಪಾಸು ಮಾಡಿದವರಿಲ್ಲವೆ!

ಶ್ರೀ ಕಡಿದಾಳ್ ಮಂಜಪ್ಪನವರು.—ಊರಿನಲ್ಲಿ ಕುಳಿತು ಓದಿದವರನ್ನು ನೇಮಿಸುವ ಹಾಗಿಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ಅಂಥವರು ಸಬ್ ಓವರ್‌ಸಿಯರಾಗಿ ಈ ಇಲಾಖೆಯಲ್ಲಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ಇಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ಕಡೂರು ಚಿಕ್ಕಮಗಳೂರಿನಲ್ಲಿ ಇಂಥವರಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪನವರು.—ವರ್ಕ್ ಇನ್‌ಸ್ಪೆಕ್ಟರಾಗಿರಬಹುದು.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ಅವರು ಸರಿಯಾಗಿ ಅಳತೆ ಮಾಡುವುದಿಲ್ಲ, ಪುಸ್ತಕದಲ್ಲಿ ನಮೂದುಮಾಡುವುದಿಲ್ಲವೆಂಬುದು ಗೊತ್ತಿದೆಯೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಅವರು ಲೆಕ್ಕ ಇಡಬೇಕಾಗಿಯೂ ಇಲ್ಲ, ಅಳತೆಯನ್ನೂ ಮಾಡಬೇಕಾಗಿಲ್ಲ.

ಶ್ರೀ ವೈ. ಎಂ ಚಂದ್ರಶೇಖರಯ್ಯನವರು.—ನಮ್ಮ ತಾಲ್ಲೂಕಿನಲ್ಲಿ ಇಬ್ಬರು ಇದ್ದಾರೆ, ಅವರು ಎಲ್ಲವನ್ನೂ ಮಾಡುತ್ತಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಅವರನ್ನು ಸಬ್ ಓವರ್‌ಸಿಯರಾಗಿ ನೇಮಕ ಮಾಡಿಕೊಂಡಿರಬೇಕು.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ಇವರು ಸರಿಯಾಗಿ ಕೆಲಸ ಮಾಡುವುದಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪನವರು.— ಬಂದಿದ್ದರೆ ಇದುವರೆಗೆ ಅವರನ್ನು ಕೆಲಸದಲ್ಲಿ ಇಟ್ಟುಕೊಳ್ಳುತ್ತಿರಲಿಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ಈಗ ಅಲ್ಲಿ ಎರಡು ಡಿವಿಜ಼ನ್‌ಗಳಿಗೆ ಕೆಲಸ ಜಾಸ್ತಿ ಇಲ್ಲ, ಬಹಳ ಕಡಮೆಯೆಂದು ಒಪ್ಪುತ್ತೀರಾ?

Sri Kadidal MANJAPPA—That question does not arise.

Delay in Sanctioning loans to raiyats.

Q.—483. **Sri U. M. MADAPPA** (Chamarajanagar).—

Will the Government be pleased to state.—

Whether it has not come to their notice that the raiyats are put to great inconvenience as the takkavi loans, short-term loans, long-term loans and mortgage bank loans applied for by them are not being sanctioned to them in time?